ಅಸಲು ದಾವಾ ಸಂಖ್ಯೆ 168/2014

ಡಿ ಡಬ್ಲ್ಯೂಃ 1

**ದಿನಾಂಕ : 12.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ವಾದಿ ಪರ ಶ್ರೀ ಎಂ ಆರ್ ಕೆ ವಕೀಲರಿಂದಃ**

ನಾನು ಎಂ ಎ, ಬಿ ಇ.ಡಿ., ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಗಳು ಸಲ್ಲಿಸಿರುವ ವಾದಪತ್ರದ ಸಂಗತಿಗಳನ್ನು ಹಾಗೂ ಅವರ ಸಲ್ಲಿಸಿರುವ ದಾಖಲಾತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರ ಹಾಗೂ ತಿದ್ದುಪಡಿ ಪ್ರತಿವಾದ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿದ್ದೇನೆ.

ನಿಪಿ–3 ಸಾಗುವಳಿ ಪತ್ರದಲ್ಲಿ 'ಹಿಡುವಳಿ ಇಲ್ಲದ ಸರ್ಕಾರಿ ಜಮೀನನ್ನು ವಿಲೇವಾರಿ ಮಾಡಲಾಗಿರುತ್ತದೆ ' ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ–3 ರಲ್ಲಿ, 15 ವರ್ಷಗಳ ಕಾಲ ಯಾವುದೇ ಪರಭಾರೆ ಮಾಡಬಾರದು ಎಂಬ ಷರತ್ತು ಇದೆ ಎಂದರೆ ಸರಿ. ವಾದಿಯು ಸರ್ವೆ ನಂಬರ್ 805 ರ ಸ್ವತ್ತು ಸಿದ್ದಯ್ಯ ಎಂಬುವವರಿಗೆ ಮಂಜೂರಾಗಿರುತ್ತದೆ ಎಂಬ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಿದ್ದಯ್ಯ ಮತ್ತು ಬಸವಯ್ಯ ನನ್ನ ದೊಡ್ಡಪ್ಪಂದಿರು. ಸಿದ್ದಮ್ಮ ನನ್ನ ತಂದೆಯ ತಂಗಿ.

ದಾವಾ ಅನುಸೂಚಿತ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಿರುತ್ತಾರೆ ಎಂಬುದಾಗಿ ತಿಳಿಸಿರುತ್ತೇನೆ ಆ ರೀತಿ ಕೋರಿಕೊಂಡಿದ್ದ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ದಾವಾ ಅನುಸೂಚಿತ ಸ್ವತ್ತು ದಿನಾಂಕಃ 18.08.1961 ರಂದ ಮಂಜೂರಾಗಿರುವ ಸ್ವತ್ತು ಎಂದರೆ ಸರಿ. ನಾನು ಆ ಸಮಯದಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ದಿನಾಂಕಃ 08.06.1974 ನನ್ನ ಜನ್ಮ ದಿನಾಂಕವಾಗಿರುತ್ತದೆ. ಹಾಗಾಗಿ ನನಗೆ 1961 ನೇ ಸಾಲು ಮತ್ತು ಅದಕ್ಕೂ ಮೊದಲಿನ ಅವಧಿಗಳಲ್ಲಿ ಈ ಸ್ವತ್ತಿಗೆ ಸಂಬಂಧಿಸಿದಂತೆ ನಡೆದ ನಡಾವಳಿಗಳ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ನಿಪಿ–5 ರಂತೆ ವಾದಿ ಮಾದಯ್ಯ ರವರು ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದರು ಎಂಬ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತಿನಲ್ಲಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಸ್ವಾಧೀನಾನುಭವದಲ್ಲಿ ಇದ್ದು , ವ್ಯವಸಾಯಾ ಮಾಡುತ್ತಿದ್ದರು ಎಂಬ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾವು ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ಸರಿ.

ಸರ್ವೆ ನಂಬರ್ 840 ರ ಸ್ವತ್ತು ಒಟ್ಟು ಕುಟುಂಬಕ್ಕೆ ಮಂಜೂರಾದ ಸ್ವತ್ತು ಎಂಬುದಾಗಿ ನಾನು ಹೇಳಿರುತ್ತೇನೆ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ನಾನು ಪಡೆದುಕೊಂಡಿರುತ್ತೇನೆ. ಸಿದ್ದಯ್ಯನಪುರದ ಮಾದಯ್ಯ ನನ್ನ ತಾತ ಎಂದರೆ ಸರಿ. ನನ್ನ ತಾತನ ತಂದೆಯ ದೋಣನ ಮಾದಯ್ಯ ಎಂದರೆ ಸರಿ. ನನ್ನ ತಾತನನ್ನು ಮಾದ ಎಂತಲೂ ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಾತನಿಗೆ 1971ನೇ ಸಾಲಿನಲ್ಲಿ ಸರ್ವೆ ನಂಬರ್ 841/3 ಸ್ವತ್ತು ಮಂಜೂರಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 840 ನನ್ನ ತಾತನಿಗೆ ಸಂಬಂಧಿಸಿರುತ್ತದೆ ಸರ್ವೆ ನಂಬರ್ 841/3 ನಮಗೆ ಸಂಬಂಧಿಸಿದ್ದಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 15.07.1971 ರಲ್ಲಿ ನನ್ನ ತಾತನಿಗೆ ಸರ್ವೆ ನಂಬರ್ 841/3 ರ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ್ 841/3ರಲ್ಲಿನ 4 ಎಕರೆ 29 ಸೆಂಟ್ಸ್ ಜಮೀನಿನ ದಾಖಲಾತಿಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅದಕ್ಕೂ ನಮಗೂ ಸಂಬಂಧ ಇಲ್ಲ

ಎಂದು ನುಡಿಯುತ್ತಾರೆ. ಮಾದಯ್ಯ ರವರಿಗೆ 1961 ನೇ ಸಾಲಿನಲ್ಲಿಯೂ ನನ್ನ ತಾತನಿಗೆ 1971 ನೇ ಸಾಲಿನಲ್ಲಿ ಸ್ವತ್ತುಗಳು ಮಂಜೂರಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1971 ನೇ ಸಾಲಿನಲ್ಲಿ ಹೇಳಿರುವ ಸಂಗತಿ ನಮಗೆ ಅನ್ವಯವಾಗಿರುವುದಿಲ್ಲ ಎಂದು ನುಡಿಯುತ್ತಾರೆ. **ನ್ಯಾಯಾಲಯವು, ಅನ್ವಯವಾಗುವುದಿಲ್ಲ ಎಂದು ಹೇಳಿದ್ದೀರಿ ಯಾವ ಆಧಾರದ ಮೇಲೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ನಮಗೆ ಸಂಬಂಧಿಸಿದ್ದಲ್ಲ ಎಂದು ನುಡಿಯುತ್ತಾರೆ.**

ಸರ್ವೆ ನಂಬರ್ 841/3 ರ ಸ್ವತ್ತನ್ನು ಮಂಜೂರಾಗುವ ಪೂರ್ವದಲ್ಲಿ, ನಮ್ಮ ಕುಟುಂಬದಲ್ಲಿ 5 ಜನ ಸದಸ್ಯರು ಇದ್ದಾರೆ ಎಂಬುದಾಗಿ ನನ್ನ ತಾತ ಅರ್ಜಿಯಲ್ಲಿ ನಮೂದು ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದ ಪತ್ರವನ್ನು ಸಲ್ಲಿಸುವ ಮೊದಲು ಹಿರಿಯರಿಂದ ಕೇಳಿ ತಿಳಿದುಕೊಂಡು ಬರೆಸಲಾಯಿತು ಎಂಬ ಬಗ್ಗೆ ತಿಳಿಸಲು ತೊಂದರೆ ಇರಲಿಲ್ಲ. ನನ್ನ ತಂದೆ ಸಲ್ಲಿಸಿರುವ ಪ್ರತಿವಾದಪತ್ರದ 7ನೇ ಪ್ಯಾರಾದಲ್ಲಿ ವಿಭಾಗವಾಗಿರುವ ಬಗ್ಗೆ ತಿಳಿಸಿರುತ್ತೇವೆ. ಆ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇವೆ. ಪ್ರತಿವಾದ ಪತ್ರದಲ್ಲಿ ನನ್ನ ತಂದೆ ವಿಭಾಗಕ್ಕೆ ಸಂಬಂಧಿಸಿದಂತೆ ನಿರೂಪಿಸಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ಪ್ರತಿವಾದ ಪತ್ರದ ಸಂಗತಿಗಳಂತೆ ವಿಭಾಗ ಬರವಣಿಗೆಯಲ್ಲಿ ಆಗಿರುತ್ತದೆ, ಬಾಯಿಮಾತಿನಲ್ಲಿ ವಿಭಾಗವಾಗಿತ್ತು ಎಂಬುದು ತಪ್ಪಿನಿಂದ ಕೂಡಿರುತ್ತದೆ. ಸದರಿ ವಿಭಾಗದಂತೆ ನನ್ನ ತಂದೆಗೆ ದಾವಾ ಅನುಸೂಚಿತ ಸ್ವತ್ತಿನಲ್ಲಿ 3 ಎಕರೆ 2 ಸೆಂಟ್ಸ್ ಜಮೀನು ಬಂದಿತ್ತು ಎಂಬುದಾಗಿ ಹೇಳಿರುತ್ತೇವೆ ಎಂದರೆ ಸರಿ.

ತಿದ್ದುಪಡಿ ಪ್ರತಿವಾದ ಪತ್ರದ ಪ್ಯಾರಾ ಸಂಖ್ಯೆ 9(ಎ) ರಲ್ಲಿ, ದಿನಾಂಕಃ 12.07.1982 ರಲ್ಲಿ ವಿಭಾಗ ಮಾಡಿಕೊಂಡಾಗ 2 ಎಕರೆ ವಾದಿಗೂ, ಒಂದು ಎಕರೆ ನನ್ನ ತಂದೆಗೂ ಹಾಗೂ ಪಶ್ಚಿಮದ ಎರಡು ಎಕರೆ ಚೌಡಯ್ಯರವರಿಗೆ ಬಂದಿರುತ್ತದೆ ಎಂಬುದಾಗಿ ತಿಳಿಸಿರುತ್ತೇನೆ ಎಂದರೆ ಸರಿ.

ನಿಡಿ-45 ರ ಸ್ಟಾಂಪ್ ಪತ್ರವನ್ನು ಚೌಡಯ್ಯನವರ ಹೆಸರಿನಲ್ಲಿ ತಂದಿರುತ್ತಾರೆ. ನಿಡಿ-45 ರ 2ನೇ ಪುಟದಲ್ಲಿ ಭಾಗ್ಯಮ್ಮರವರು 1980 ನೇ ಸಾಲಿನಲ್ಲಿ ಖರೀದಿ ಮಾಡಿರುವುದಾಗಿ ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಪ್ಪಾಗಿ ನಮೂದು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ಪ್ರತಿವಾದಪತ್ರದಲ್ಲಿ ಬರೆಸಲು ತೊಂದರೆ ಇತ್ತಾ ಎಂದರ ಸಾಕ್ಷಿಯು ಕಣ್ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-45 ಸ್ಟಾಂಪ್ ಪತ್ರವನ್ನು ಭಾಗ್ಯಮ್ಮರವರು ತೆಗೆದುಕೊಂಡು ಬಂದಿರುತ್ತಾರೆ ಎಂದು ನನ್ನ ಪ್ರತಿವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಿಡಿ-46 ವಿಭಾಗ ಪತ್ರಕ್ಕೆ ನನ್ನ ಅತ್ತೆ ಸಹಿ ಪಡೆಯಲು ತೊಂದರೆ ಇರಲಿಲ್ಲ. ನಿಡಿ-46 ರಂತೆ ಸದರಿ ದಾಖಲಾತಿ ಆದ ದಿನಾಂಕದಿಂದ ಪ್ರತ್ಯೇಕವಾಗಿ ಸ್ವತ್ತುಗಳನ್ನು ಅನುಭವಿಸಿಕೊಂಡು ಹೋಗುವ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಡಿ-46 ದಾಖಲಾತಿ ಆಗುವ ಮೊದಲೇ ಬಸವಯ್ಯನವರಿಗೆ ಸರ್ವೆ ನಂಬರ್ 861 ಹಾಗೂ ನನ್ನ ತಾತನಿಗೆ 841/3 ರ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿ. ಸದರಿ ಸ್ವತ್ತುಗಳನ್ನು ವಿಭಾಗ ಪತ್ರದಲ್ಲಿ ಸೇರಿಸಲು ತೊಂದರೆ ಇತ್ತಾ ಎಂಬುದಾಗಿ ನನ್ನ ತಂದೆಯನ್ನು ಕೇಳಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಸ್ವತ್ತುಗಳು ನಮಗೆ ಅನ್ವಯಿಸುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನ ಐದು ಜನ ಮಕ್ಕಳುಗಳಿಗೆ ಸರ್ಕಾರದಿಂದ ಪ್ರತ್ಯೇಕವಾಗಿ ಜಮೀನುಗಳು ಮಂಜೂರಾಗಿತ್ತು ಎಂದರೆ ಸರಿ.

ನಿಡಿ– 45 ರ ಮೊದಲನೇ ಪುಟದಲ್ಲಿ ದಿನಾಂಕ 09.12 ಎಂಬುದನ್ನು ತಿದ್ದಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಕಸ್ಮಾತ್ ಆಗಿ ಇಂಕ್ ಬಿದ್ದಿರಬಹುದು ಎಂದು ನುಡಿಯುತ್ತಾರೆ. ನಿಡಿ–45ರ 10ನೇ ಸಾಲಿನಲ್ಲಿ ಅಂಕಿಯಲ್ಲಿರುವ ಮತ್ತು ಅಕ್ಷರದಲ್ಲಿರುವ ತಾರೀಖುಗಳನ್ನು ಒಡೆದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯ ಪ್ರತಿಫಲದ ಮೊತ್ತವನ್ನು ಸಹಾ ತಿದ್ದಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಡಿ–45 ರಲ್ಲಿ ನಮೂದು ಮಾಡಿರುವ ಸ್ವತ್ತು ವಾದಿಗೆ ಸಬಂಧಿಸಿದ ಸ್ವತ್ತಾಗಿರುತ್ತದೆ. ನಿಡಿ–45 ರಲ್ಲಿ ಚೌಡಯ್ಯನ ಹೆಂಡತಿ ಭಾಗ್ಯರವರಿಗೆ ಎಂದು ನಮೂದು ಇರುತ್ತದೆ ಆದರೆ ಅವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಡಿ–45ರ 2ನೇ ಪುಟದಲ್ಲಿ, ಚೌಡಪ್ಪ ಎಂಬುದನ್ನು ಒಡೆದುಹಾಕಿ ಭಾಗ್ಯಮ್ಮ ಎಂದು ಬರೆಯಲಾಗಿದೆ ಎಂದರೆ ಸರಿ.

ನಿಡಿ– 46 ರಲ್ಲಿ ವಾದಿಗೆ 2 ಎಕರೆ ಸ್ವತ್ತು ಎಂಬುದಾಗಿ ನಮೂದು ಮಾಡಿರುತ್ತಾರೆ ಆದರೆ ಚೆಕ್ಕು ಬಂದಿ ನಮೂದು ಮಾಡಿಲ್ಲ ಎಂದರೆ ಸರಿ. ನಿಡಿ–46 ರ ವಿಭಾಗ ಪತ್ರದ ಹಿಂಭಾಗದಲ್ಲಿ ಸರ್ವೆ ನಂಬರ್ 840 ಚಿಕ್ಕಲ್ಲೂರು ಗ್ರಾಮ ಮಾದಯ್ಯ ಮಾಡಿರುವ ಮಾರಾಟದ ಕರಾರು ಇರುವ ತಕರಾರು ಅರ್ಜಿ ಸಲ್ಲಿಸಿದೆ (ಚೌಡಯ್ಯನಿಂದ) ಎಂಬುದಾಗಿ ನಮೂದು ಇದೆ ಎಂದರೆ ಸಾಕ್ಷಿಯು ರಫ್ ಆಗಿ ನಮೂದು ಮಾಡಿರಬಹುದು ಎಂದು ನುಡಿಯುತ್ತಾರೆ. ನಿಡಿ–45ರಲ್ಲಿ ಒಡೆದು ಬರೆಯಾದ ಬಗ್ಗೆ ಹಾಗೂ ಡಿ–46 ರಲ್ಲಿ ನಮೂದಾಗಿರುವ ಷರಾದ ಗ್ಗೆ ನಾನು ನನ್ನ ತಂದೆಯಿಂದ ಕೇಳಿ ತಿಳಿದುಕೊಂಡಿದ್ದೆ. 1982 ನೇ ಸಾಲಿನಲ್ಲಿ ನಾನು ಅಪ್ರಾಪ್ತ ವಯಸ್ಕ ಎಂದರೆ ಸರಿ.

1961 ನೇ ಸಾಲಿನಲ್ಲಿ ಹಾಗೂ ಅದಕ್ಕೂ ಪೂರ್ವದಲ್ಲಿ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೆವು ಎಂಬ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇವೆ. ನಿಡಿ–45 ರಲ್ಲಿರುವ ಸ್ವತ್ತು ಪಿ ಟಿ ಸಿ ಎಲ್ ಕಾಯ್ದೆಯಡಿ ಬರುವ ಸ್ವತ್ತಾಗಿರುವ ಕಾರಣ ಸದರಿ ಕರಾರಿಗೆ ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–45 ಮತ್ತು ನಿಡಿ–46 ದಾಖಲಾತಿಗಳನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರತಿವಾದ ಪತ್ರದಲ್ಲಿ ಸರ್ವೆ ನಂಬರ್ 840 ರಜಮೀನು ಸಿದ್ದಯ್ಯನಪುರದ ಮಾದಯ್ಯನಿಂದ ಅವರು ಮಕ್ಕಳುಗಳಾದ ಸಿದ್ದಯ್ಯ ಮತ್ತು ಚೌಡಯ್ಯರವರಿಗೆ ಐ ಎನ್ ಹೆಚ್ 10/1985–86 ರಂತೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು ದ್ದಯ್ಯನಪುರದ ಮಾದಯ್ಯನಿಂದ ಬಂದಿರುವುದಿಲ್ಲ ಮಾದಯ್ಯನಿಂದ ಚೌಡಯ್ಯನಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದಪತ್ರದಲ್ಲಿ ಆ ಬಗ್ಗೆ ನಮೂದು ಮಾಡಿಸಿರುತ್ತೇನೆ. ರೆವೆನ್ಯೂ ನ್ಯಾಯಾಲಯಲ್ಲಿ ಆ ಪ್ರಕ್ರಿಯೆಗಳ ಬಗ್ಗೆಯೂ ಸಹಾ ಪ್ರತಿವಾದಪತ್ರದಲ್ಲಿ ನಮೂದು ಮಾಡಿರುತ್ತೇನೆ. ಸಿದ್ದಯ್ಯನಪುರದ ಮಾದಯ್ಯನಿಗೆ ಯಾವ ರೀತಿ ಖಾತೆ ಬಂದಿರುತ್ತದೆ ಎಂಬ ಬಗ್ಗೆ ನಾನು ಯಾವುದೇ ದಾಖಲೆ ನಮೂದು ಮಾಡಿರುವುದಿಲ್ಲ. ನನ್ನ ತಾತ ಸಿದ್ದಯ್ಯನಪುರದ ಮಾದಯ್ಯ 1975–76 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ಈಗ್ಗೆ 10 ವರ್ಷಗಳ ಹಿಂದೆ ಮಾದಯ್ಯ ಮರಣ ಹೊಂದಿರುತ್ತಾರೆ. ನಾನು ಈಗ ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ಒಂದು ಹಕ್ಕು ಬದಲಾವಣೆ ವಹಿ ನನ್ನ ಬಳಿ ಇರುತ್ತದೆ.

ಅಸಲು ದಾವಾ ಸಂಖ್ಯೆ 168/2014

ಡಿ ಡಬ್ಲ್ಯೂಃ 1

ಸರ್ವೆ ನಂಬರ್ 841/3 ಸ್ವತ್ತು ಸಹಾ ಸಿದ್ದಯ್ಯನಪುರದ ಮಾದಯ್ಯನಿಂದ ಮಕ್ಕಳಾದ ನಿಂಗಯ್ಯ ಮತ್ತು ಸಿದ್ದಯ್ಯನಪುರದ ಮಾದಯ್ಯರವರಿಗೆ ಹಕ್ಕು ಬದಲಾವಣೆ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾತ ಸಿದ್ದಯ್ಯನಪುರದ ಮಾದಯ್ಯ ಮರಣ ಹೊಂದಿದ ನಂತರ ಐ ಎನ್ ಹೆಚ್ 10/1985-86 ರಂತೆ ಸ್ವತ್ತು ವರ್ಗಾವಣೆಯಾಗಿದ್ದು ಸದರಿ ಪ್ರಕ್ರಿಯೆಯಲ್ಲಿ ಅವರ ಎಲ್ಲಾ ಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ನನ್ನ ತಾತ ಮರಣ ಹೊಂದಿದ 10 ವರ್ಷಗಳ ನಂತರ ಪೌತಿ ಖಾತೆಯನ್ನು ಮಾಡಲಾಗಿತ್ತು ಎಂಬ ಬಗ್ಗೆ ನನ್ನ ತಂದೆಯನ್ನು ನಾನು ಕೇಳಿ ತಿಳಿದುಕೊಂಡಿಲ್ಲ. ಐ ಎನ್ ಹೆಚ್ 10/1985-86 ಪ್ರಕ್ರಿಯೆಯು ಒಟ್ಟು 5 ಎಕರೆ 2 ಸೆಂಟ್ಸ್ ಸ್ವತ್ತಿಗೆ ಸಂಬಂಧಿಸಿದಂತೆ ಆಗಿರುತ್ತದೆ ಎಂದರೆ ಸರಿ. ಮಾದಯ್ಯನಿಂದ ಸಿದ್ದಯ್ಯ ಮತ್ತು ಚೌಡಯ್ಯರವರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿ. ನಿಡಿ-45 ಮತ್ತು ನಿಡಿ-46 ರಂತೆ 1982-83 ನೇ ಸಾಲಿನಲ್ಲಿಯೇ ಖಾತೆ ಬದಲಾವಣೆ ಮಾಡಿಕೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-9 ದಾಖಲಾತಿಯನ್ನು ಕಂದಾಯ ಅಧಿಕಾರಗಳ ಜೊತೆ ಸೇರಿಕೊಂಡು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

ಸಿದ್ದಯ್ಯನಪುರದ ಮಾದಯ್ಯನ ಮಕ್ಕಳಿಗೆ ಯಾವ ಯಾವ ಸ್ವತ್ತು ವಿಭಾಗವಾಗಿತ್ತು ಎಂಬ ಬಗ್ಗೆ ದಾಖಲಾತಿಗಳು ಇಲ್ಲ ಎಂದರೆ ಸರಿ. ಮಾದಯ್ಯರವರು ರೆವೆನ್ಯೂ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ತಕರಾರು ದಾಖಲಿಸಿದ್ದೆ ಎಂದರೆ ಸರಿ. ಸದರಿ ತಕರಾರಿನಲ್ಲಿ ದಿನಾಂಕಃ 04.08.1980 ರಲ್ಲಿ ಕರಾರು ಆಗಿತ್ತು ಎಂಬುದಾಗಿ ನಮೂದು ಮಾಡಿಸಿದ್ದೆವು ಎಂದರೆ ಸರಿ. ಸದರಿ ತಕರಾಗಿನಲ್ಲಿ ಮಾದಯ್ಯನಿಗೆ ಸ್ವತ್ತು ಮಂಜೂರಾಗಿದ್ದ ಬಗ್ಗೆ ಪ್ರಸ್ತಾಪಿಸಲ್ಪಟ್ಟಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪಾಟೀ ಸವಾಲಿಗೆ ಸಮಯದಲ್ಲಿ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ